**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3500/2021**
**ಚಾಸಾ - 01 / ಪ್ರಾಸಾ - 02**

| | |
|---|---|
| ಹೆಸರು | **ಪದ್ಮಾವತಿ** |
| ಗಂಡನ ಹೆಸರು | **ಜಯರಾಂ** |
| ವಯಸ್ಸು | **42** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಬೈರಪ್ಪನ ಪಾಳ್ಯ** |

**ದಿನಾಂಕಃ 08-11-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಪ್ರಾಸಾ-1 ರವರು ನನ್ನ ನಾದಿನಿ ಮತ್ತು ಚಾಸಾ-3 ರವರು ನನ್ನ ಮಾವ. ಆರೋಪಿಗಳು ನನ್ನ ಚಿಕ್ಕಮಾವನ ಮಗ ಮತ್ತು ಸೊಸೆ ಆಗಿರುತ್ತಾರೆ. 2 ನೇ ತಾರೀಖಿನಂದು ಗಲಾಟೆ ಆಗಿರುತ್ತದೆ. ನಾನು 4 ನೇ ತಾರೀಖಿನಂದು ದೂರನ್ನು ನೀಡಿರುತ್ತೇನೆ. ಆರೋಪಿಗಳು ಯಾವಾಗಲೂ ಮನೆಯಲ್ಲಿ ಇರಲು ಬಿಡದೇ ಪ್ರಾಸಾ-1 ಮತ್ತು ಚಾಸಾ-3 ರವರ ಜೊತೆ ಗಾಲಾಟೆಯನ್ನು ಮಾಡುತ್ತಿದ್ದರು ಮತ್ತು ಆ ವಿಷಯವನ್ನು ನಾನು ಅವರ ಬಳಿ ಕೇಳಿದಾಗ ಅವರು ನನ್ನ ಜೊತೆಯಲ್ಲಿಯೂ ಸಹ ಗಲಾಟೆ ಮಾಡಿದರು. ನಂತರ ನಾನು ಪೋ. ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನಿಮ್ಮ ಸ್ವಂತ ಊರು ಮಾಗಡಿ ತಾಃ ಸೋಲೂರು ಹೋಬಳಿಯ ಬೈರಪ್ಪನ ಪಾಳ್ಯ ಆಗಿದೆ ಮತ್ತು ಅಲ್ಲಿ ನಿಮಗೆ ಸೇರಿದ ಜಮೀನು ಮತ್ತು ಮನೆ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಬೆಂಗಳೂರಿನಿಂದ ಆಗಾಗ ಬೈರಪ್ಪನ ಪಾಳ್ಯಕ್ಕೆ ಬಂದು ಹೋಗುತ್ತಿರಾ ಮತ್ತು ಅಲ್ಲಿ ಪ್ರಾಸಾ-1 ಮತ್ತು ಚಾಸಾ-3 ರವರು ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳು ಮನೆಯ ವಿಚಾರದಲ್ಲಿ ಆಗಾಗ ಕುಡಿದುಕೊಂಡು ಬಂದು ಪ್ರಾಸಾ-1 ಮತ್ತು ಚಾಸಾ-3 ರವರಿಗೆ ಆ ಮನೆ ಅವರಿಗೆ ಬರಬೇಕು ಮತ್ತು ಸದರಿ ಮನೆಯನ್ನು ಖಾಲಿ ಮಾಡುವಂತೆ ಹೇಳಿ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಮತ್ತು ಅವರಿಗೆ ಕೊಲೆ ಬೆದರಿಕೆ ಹಾಕುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಘಟನೆಯಿಂದ ಭಯ ಪಟ್ಟು ಪ್ರಾಸಾ-1 ಮತ್ತು ಚಾಸಾ-3 ರವರು ಬೇರೆ ಮನೆಗೆ ಹೋಗಿ ಮಲಗಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಊರಿಗೆ ಬಂದಾಗ ಚಾಸಾ-3 ರವರು ನಿಮಗೆ ಸದರಿ ವಿಷಯವನ್ನು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.02-07-2021 ರಂದು ಸಂಜೆ 4.30 ರ ಸಮಯದಲ್ಲಿ ನೀವು ಬೈರಪ್ಪನ ಪಾಳ್ಯಕ್ಕೆ ಹೋಗಿದ್ದು, ನಿಮ್ಮ ಮನೆಯ ಬಳಿ 1 ನೇ ಆರೋಪಿಗೆ ಏಕೆ ಪ್ರಾಸಾ-1 ಮತ್ತು ಚಾಸಾ-3 ರವರ ಮೇಲೆ ಗಲಾಟೆ ಮಾಡುತ್ತಿಯಾ ಎಂದು ಕೇಳಿದಾಗ ಆರೋಪಿಗಳು ನಿಮ್ಮ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆಯನ್ನು ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

1 ನೇ ಆರೋಪಿಯು ಮರದ ದೊಣ್ಣೆಯಿಂದ ನಿಮ್ಮ ಎರಡೂ ಕೈಗಳ ಮೇಲೆ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಬಿಡಿಸಲು ಬಂದ ಚಾಸಾ-3 ರವರಿಗೆ ಬೈದರು ಮತ್ತು 1 ನೇಆರೋಪಿಯ ಪ್ರಾಸಾ-1 ರವರ ಬಟ್ಟೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಲ್ಲೆ ಇದ್ದ ಚಾಸಾ-4 ಮತ್ತು 5 ರವರು ಗಲಾಟೆಯನ್ನು ಬಿಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ನೆಲಮಂಗಲದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೀರಾ ಮತ್ತು ಆರೋಪಿಗಳ ವಿರುದ್ದ ಕ್ರಮವನ್ನು ಕೈಗೊಳ್ಳುವಂತೆ ಕೋರಿ ದಿ.04-07-2021 ರಂದು ನಿಪಿ-3 ರಂತೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ಮುದ್ದೆ ಮಾಲು-1 ನ್ನು ತೋರಿಸಿದ್ದು, ಅದರಿಂದ 1 ನೇ ಆರೋಪಿಯು ನಿಮ್ಮ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಘಟನೆ ನಡೆದು ಸುಮಾರು 3 ವರ್ಷ ಆಗಿರುವುದರಿಂದ ನೀವು ಈ ಮೇಲೆ ಹೇಳಿರುವ ವಿಷಯವನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಲು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ವಿ. ಎಸ್ , ವಕೀಲರಿಂದಃ-**

1. ನೀವು ಮೊದಲಿನಿಂದಲೂ ಬೆಂಗಳೂರಿನಲ್ಲಿಯೇ ವಾಸಿಸುತ್ತಿದ್ದೀರಾ ಎಂದರೆ ಸಾಕ್ಷಿಯು ಮೊದಲು ತಾವು ಬೈರಪ್ಪನ ಪಾಳ್ಯದಲ್ಲಿ ವಾಸ ಮಾಡುತ್ತಿದ್ದೇನು ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕಳೆದ 4 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡುತಿದ್ದೇನೆ ಎನ್ನುತ್ತಾರೆ. ನಾನು ಬೈರಪ್ಪನ ಪಾಳ್ಯದಲ್ಲಿ ವಾಸ ಮಾಡಿದ್ದೇನು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನಗೆ ಬೈರಪ್ಪನ ಪಾಳ್ಯದಲ್ಲಿ ಮನೆ ಮತ್ತು ಜಮೀನು ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು

ಹಾಜರುಪಡಿಸಿಲ್ಲ ಮತ್ತು ಸದರಿ ದಾಖಲೆಗಳನ್ನು ನನ್ನ ಬಳಿ ಕೇಳಿರುವುದಿಲ್ಲ. ನಿಪಿ-3 ನ್ನು ನಾನೇ ಬರೆದಿರುತ್ತೇನೆ.

2. ನಿಮ್ಮ ಮತ್ತು ಆರೋಪಿಯ ನಡುವೆ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ಮಾಗಡಿಯ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವು ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಬೈರಪ್ಪನ ಪಾಳ್ಯ ಗ್ರಾಮದ ಸುತ್ತಾಮುತ್ತಲು ಹಲವಾರು ಮನೆಗಳು ಇವೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವರದೇನಹಳ್ಳಿ ಹ್ಯಾಂಡ್ ಪೋಸ್ಟ್ ನಿಂದ ಇರುವ ಮುಖ್ಯ ರಸ್ತೆಯು ಬೈರಪ್ಪನ ಪಾಳ್ಯದ ಮುಖಾಂತರ ನೆಲಮಂಗಲಕ್ಕೆ ಹೋಗುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ರಸ್ತೆಯು ಜನಜಂಗುಳಿಯಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನೀವೇ ಆರೋಪಿಯ ಮೇಲೆ ಹಲ್ಲೆಯನ್ನು ಮಾಡಿ 2 ನೇ ಆರೋಪಿಯ ಬಟ್ಟೆಯನ್ನು ಹರಿದು ಹಾಕಿ ಅವರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ನಿಮ್ಮ ಮತ್ತು ಚಾಸಾ-3 ರವರವಿರುದ್ದ ದಾವೆಯನ್ನು ಸಲ್ಲಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ನೀವು ಆರೋಪಿಗಳ ಮೇಲೆ ದ್ವೇಷವನ್ನು ಇಟ್ಟುಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

3. ಮುದ್ದೆ ಮಾಲು-1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಮುದ್ದೆ ಮಾಲು-1 ನ್ನು ಈ ಪ್ರಕರಣಕ್ಕಾಗಿ ನೀವೇ ಸೃಷ್ಟಿ ಮಾಡಿ ಪೋಲೀಸರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ನನ್ನ ಮೇಲೆ ಹಲ್ಲೆಯನ್ನು ಮಾಡಿದಾಗ ನನಗೆ ರಕ್ತ ಗಾಯ ಆಗಿರುತ್ತದೆ, ಆದರೆ ನನ್ನ ಬಟ್ಟೆ ಮೇಲೆ ಯಾವುದೇ ರಕ್ತದ ಕಲೆ

ಆಗಿರುವುದಿಲ್ಲ ಮತ್ತು ನನ್ನ ಕೈ ಮೇಲೆ ಗಾಯದ ಗುರುತು ಆಗಿರುತ್ತದೆ. ಚಾಸಾ-3 ರವರ ಮಾತನ್ನು ಕೇಳಿಕೊಂಡು ನೀವೇ ಬಿದ್ದು ಗಾಯವನ್ನು ಮಾಡಿಕೊಂಡು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-3 ಮತ್ತು 1 ನೇ ಆರೋಪಿಯ ತಂದೆಯ ನಡುವೆ ಮೊದಲಿನಿಂದಲೂ ಯಾವುದೇ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮತ್ತು ಆರೋಪಿಗಳ ನಡುವೆ ಮೊದಲಿನಿಂದಲೂ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಗಲಾಟೆ ಆದ ನಂತರ ಮಾತುಕತೆ ಇರುವುದಿಲ್ಲ ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ -**

**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | **ವ್ಯವಸಾಯ** |
| ವಿಳಾಸ | |

ದಿನಾಂಕಃ **07-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು - ಆರೋಪಿ ಪರ ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**